1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

Civil Misc.127/2023

PW- 01

ಪ್ರ. ಬೋ. ದಿನಾಂಕಃ 23-07-2023

| | | |
|---|---|---|
| ಹೆಸರು ಶ್ರೀ/ ಶ್ರೀಮತಿ | : | ಎಸ್ ಬಿ ಚಂದ್ರಪ್ಪ |
| ತಂದೆ/ಗಂಡನ ಹೆಸರು | : | ಬಸಪ್ಪ |
| ವಯಸ್ಸು | : | 69 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ಶಿರಮಗೊಂಡನಹಳ್ಳಿ |

**ಮುಖ್ಯ ವಿಚಾಣೆ** ಃ- ಅರ್ಜಿದಾರರ ಪರ ಶ್ರೀ ಕೆ ಹೆಚ್ ಹೆಚ್ ವಕೀಲರಿಂದ.

ಅರ್ಜಿದಾರರ ಪರ ವಕೀಲರು ಸಾಕ್ಷಿಯ ಮುಖ್ಯ ವಿಚಾರಣಾ ಪ್ರಮಾಣಪತ್ರ ಸಲ್ಲಿಸಿದ್ದು, ಅದರಲ್ಲಿ ಬರೆದ ವಿಷಯಗಳು ಸತ್ಯವಾಗಿರುತ್ತವೆ ಹಾಗೂ ನಾನೇ ಬರೆಸಿದ್ದೇನೆ.

ನನ್ನ ಜಮೀನು ಸರ್ವೆ ನಂ.34/4 ಕ್ಕೆ ಸಂಬಂಧಪಟ್ಟಂತೆ 2022-23 ರ ಸಾಲಿನ ಪಹಣಿ ಪತ್ರಿಕೆ ಹಾಜರುಪಡಿಸಿದ್ದು , ಅದನ್ನು ನಿಪಿ.1 ಎಂದು , ದಿ.21-11-20219 ರ ಕರ್ನಾಟಕ ರಾಜ್ಯ ಪತ್ರದ ದೃಢೀಕೃತ ನಕಲು ಹಾಜರುಪಡಿಸಿದ್ದು, ಅದನ್ನು ನಿಪಿ.2 ಎಂದು, ನನ್ನ ಜಮೀನಿನಲ್ಲಿ ನಾನು ತೆಗೆಸಿದ ಫೋಟೋ ಮತ್ತು ಫೋಟೋದ ಸಿ.ಡಿ ಹಾಜರುಪಡಿಸಿದ್ದು, ಅವುಗಳನು ನಿಪಿ.3 ಮತ್ತು 4 ಎಂದು ಗುರುತಿಸಲಾಯಿತು.

ಪಾಟೀಸವಾಲುಃ- ಎದುರುದಾರರ ಪರ ಶ್ರೀ ಎಂ.ಆರ್ ಎಂ ವಕೀಲರಿಂದ.

ನನ್ನ ಜಮೀನು ಸರ್ವೆ ನಂ.34/4 ರ ಕ್ಷೇತ್ರ 1 ಎಕರೆ 2 ಗುಂಟೆ ಇದೆ. ಕೆ ಪಿ ಟಿ ಸಿ ಎಲ್ ರವರು ಲೈನ್ ಎಳೆದಿದ್ದು , ಆ ಗೋಪುರ ನನ್ನ ಜಮೀನಿನಲ್ಲಿರುವುದಿಲ್ಲ. ಜಮೀನಿನಲ್ಲಿ ಗೋಪುರ ಇದ್ದಾಗ ಮಾತ್ರ ಅಂತಹ ಜಮೀನಿನ ಮಾಲೀಕರಿಗೆ ಮಾತ್ರ ನಷ್ಟ ಪರಿಹಾರದ ಹಣ ಕೊಡಬೇಕಾಗುತ್ತದೆ, ಗೋಪುರ ಇಲ್ಲದೇ ಜಮೀನಿನಲ್ಲಿ ಕೇವಲ ಲೈನ್

ಎಳೆದಾಗ ಆ ಜಮಿನಿನ ಮಾಲೀಕರಿಗೆ ನಷ್ಟ ಪರಿಹಾರ ಕೊಡಲು ಬರುವುದಿಲ್ಲ ಎನ್ನುವುದು ನನಗೆ ಗೊತ್ತಿಲ್ಲ. ಕೆ ಪಿ ಟಿ ಸಿ ಎಲ್ ರವರು ಲೈನ್ ಎಳೆಯುವಾಗ ನಾನು ನಷ್ಟ ಪರಿಹಾರ ಕೊಡಿ ಎಂದು ಕೇಳಿರುವುದಿಲ್ಲ ಎನ್ನುವುದು ನಿಜ. ಲೈನ್ ಎಳೆಯುವಾಗ ನಾನು ಕೆ ಪಿ ಟಿ ಸಿ ಎಲ್ ರವರಿಗೆ ಅಡ್ಡಿಪಡಿಸಿರವುದಿಲ್ಲ. ಸದರಿ ಕೆ ಪಿ ಟಿ ಸಿ ಎಲ್ ನವರು ನನಗೆ ಪರಿಹಾರ ಕೊಡುತ್ತೇವೆ ಎಂದು ಆಶ್ವಾಸನೆ ಕೊಟ್ಟಿಲ್ಲ ಎನ್ನುವುದು ನಿಜ.

ನನ್ನ ಜಮೀನಿನಲ್ಲಿ ಭತ್ತ ಬೆಳೆಯುತ್ತಿದ್ದೆ, ಈಗ ಬೆಳೆಯುತ್ತಿರುವುದಿಲ್ಲ, ನನ್ನ ಜಮೀನಿನಲ್ಲಿ ಬೆಳೆ ಬೆಳೆಯಲು ಯಾವುದೇ ತೊಂದರೆ ಇರುವುದಿಲ್ಲ. ನನ್ನ ಜಮೀನು ಕೃಷಿ ಜಮೀನು ಆಗಿದ್ದು, ಕೃಷಿಯೇತರ ಜಮೀನು ಆಗಿ ಪರಿವರ್ತನೆ ಮಾಡಲು ನಾನು ಅರ್ಜಿ ಸಲ್ಲಿಸಿಲ್ಲ. ಸದರಿ ಜಮೀನು ಊರಿನಿಂದ ದೂರ ಇರುವುದಿಲ್ಲ, ಊರ ಹತ್ತಿರ ಇರುತ್ತದೆ. ನಮ್ಮ ಜಮೀನು ನಮ್ಮ ಊರಿನಿಂದ ಪೂರ್ವಭಾಗಕ್ಕೆ ಒಂದು ಫರ್ಲಾಂಗ್ ದೂರ ಇದೆ. ಒಂದು ಎಕರೆಗೆ ಐವತ್ತು ಲಕ್ಷ ರೂಪಾಯಿ ಬೆಲೆ ಬಾಳುತ್ತದೆ ಅಂತಾ ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಆದರೆ ಉಪ ನೋಂದಣಾಧಿಕಾರಿಗಳ ಮಾರುಕಟ್ಟೆ ಬೆಲೆ ನಾನು ಹಾಜರುಪಡಿಸಿರುತ್ತೇನೆ. ನನ್ನ ಜಮೀನು ಫಲವತ್ತತೆಯಿಂದ ಕೂಡಿದ್ದು, ಸಾಕಷ್ಟು ಆದಾಯ ಬರುತ್ತಿತ್ತು ಅಂತಾ ತೋರಿಸಲು ದಾಖಲೆ ಹಾಜರುಪಡಿಸಿಲ್ಲ.

ನನ್ನ ಜಮೀನಿಗೆ ನಾನು ನಷ್ಟ ಪರಿಹಾರ ಪಡೆಯಲು ಅರ್ಹತೆ ಹೊಂದಿರುವುದಿಲ್ಲ ಎನ್ನುವುದು ಸರಿಯಲ್ಲ. ಸದರಿ ಯೋಜನೆ ಸರ್ಕಾರದ್ದಾಗಿದ್ದು, ಸಾರ್ವಜನಿಕರಿಗೆ ಗುಣಮಟ್ಟದ ವಿದ್ಯುತ್ ಪೂರೈಕೆಯನ್ನು ಮಾಡಬೇಕಾಗಿರುವುದರಿಂದ ಇಂತಹ ಯೋಜನೆಯ ಅಡಿಯಲ್ಲಿನಾನು ಯಾವುದೇ ರೀತಿಯ ನಷ್ಟ ಪರಿಹಾರ ಪಡೆಯಲು ಅರ್ಹನಿರುವುದಿಲ್ಲ ಎನ್ನುವುದು ಸರಿಯಲ್ಲ. ಆದ್ದರಿಂದ ನಾನು ಸಲ್ಲಿಸಿದ ಅರ್ಜಿ ವಜಾಆಗತಕ್ಕದ್ದು ಎನ್ನುವುದು ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.